ಶ್ರೀ ಜಿ. ಎಸ್. ಬಾಗಲ್‌ಕೋಟಿ.—ಮುಖ್ಯವಾಗಿ ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದೀರಿ ಎನ್ನುವ ಉಲ್ಲೇಖ ಇಲ್ಲ. ಏತಕ್ಕೆಂದರೆ ಅಧಿಕಾರಿಗಳ ಸಮಪಾಲು ಕೂಡ ಇದರಲ್ಲಿ ಇದೆ ಎನ್ನುವ ವದಂತಿ ಇದೆ.

ಶ್ರೀ ಆರ್. ವಿ. ದೇಶಪಾಂಡೆ.—ಇದರ ಬಗ್ಗೆ ನನ್ನ ಹತ್ತಿರ ವಿವರವಾದ ಮಾಹಿತಿ ಇಲ್ಲ. ಅಧಿಕಾರಿಗಳ ಬಗ್ಗೆಯೂ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳು

೪೨೬ (೬೮೬) **ಶ್ರೀ ರಮೇಶ ಕುಮಾರ್** (ಶ್ರೀನಿವಾಸಪುರ)ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಸಾರ್ವಜನಿಕ ಕ್ಷೇತ್ರದಲ್ಲಿರುವ ಮಂಡಲಿ ಹಾಗೂ ಉದ್ದಿಮೆಗಳ ಸಂಖ್ಯೆ ಎಷ್ಟು ?

(ಆ) ಮೇಲ್ಕಂಡ ಉದ್ಯಮಗಳ ಪೈಕಿ ನಷ್ಟದಲ್ಲಿ ನಡೆಯುತ್ತಿರುವ ಉದ್ಯಮಗಳು ಎಷ್ಟು ? ಇತ್ತೀಚಿನ ಮೂರು ವರ್ಷಗಳಲ್ಲಿ (೧೫-೭-೧೯೮೫ರವರೆಗೆ) ಪ್ರತಿ ಉದ್ಯಮದಲ್ಲಿ ಕೂಡಿಬಂದ ನಷ್ಟದ ಪ್ರಮಾಣವೆಷ್ಟು ?

(ಇ) ಮೇಲ್ಕಂಡ ಉದ್ಯಮಗಳು ನಷ್ಟದಲ್ಲಿ ನಡೆಯಲು ಕಾರಣಗಳೇನು ? ಉಂಟಾದ ನಷ್ಟಕ್ಕೆ ಯಾರನ್ನು ಹೊಣೆಗಾರರನ್ನಾಗಿ ನಿರ್ಧರಿಸಲಾಗಿದೆ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) ಸಾರ್ವಜನಿಕ ಕ್ಷೇತ್ರದಲ್ಲಿ ಇದುವರೆಗೂ ೫೬ ಮಂಡಲಿಗಳು ಹಾಗೂ ಉದ್ಯಮಗಳು ಇದ್ದವು. ಈ ಪೈಕಿ ೨ ಉದ್ಯಮಗಳನ್ನು (ಚಿತ್ರದುರ್ಗ ಕಾಪರ್ ಕಂಪನಿ ಮತ್ತು ಕರ್ನಾಟಕ ಕಾಪರ್ ಕನ್ವರ್ಟಿಯಂ ಲಿಮಿಟೆಡ್) ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯೊಂದಿಗೆ ಇತ್ತೀಚೆಗೆ ವಿಲೀನಗೊಳಿಸಲಾಗಿದೆ. ಉಳಿದ ಮಂಡಲಿ ಹಾಗೂ ಉದ್ದಿಮೆಗಳ ಹೆಸರುಗಳನ್ನು ಅನುಬಂಧ—Iರಲ್ಲಿ ಕೊಡಲಾಗಿದೆ.

(ಆ) ನಷ್ಟದಲ್ಲಿ ನಡೆಯುತ್ತಿರುವ ಉದ್ಯಮಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಬದಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ನಷ್ಟದಲ್ಲಿ ನಡೆಯುತ್ತಿರುವ ಉದ್ಯಮಗಳ ಸಂಖ್ಯೆ ಮತ್ತು ಅವುಗಳ ಕೂಡಿಬಂದ ನಷ್ಟದ ವಿವರಗಳನ್ನು ಅನುಬಂಧ—IIರಲ್ಲಿ ಕೊಡಲಾಗಿದೆ. ಈ ಅಂಕಿ—ಅಂಶಗಳು ೧೯೮೧–೮೨, ೮೨–೮೩ ಹಾಗೂ ೮೩–೮೪ರ ಸಾಲಿಗೆ ಅನ್ವಯವಾಗುತ್ತವೆ. ೧೯೮೪-೮೫ನೇ ಸಾಲಿನ ಲೆಕ್ಕಪತ್ರಗಳು ಇನ್ನೂ ಅಂತ್ಯಗೊಂಡಿಲ್ಲದ ಕಾರಣ ಆದರ ವಿವರಣೆ ಒದಗಿಸಲಾಗಿಲ್ಲ.

(ಇ) ಮಂಡಲಿಗಳು ಹಾಗೂ ಉದ್ದಿಮೆಗಳು ನಷ್ಟದಲ್ಲಿ ನಡೆಯಲು ಹಲವಾರು ಕಾರಣಗಳು ಇರಲು ಸಾಧ್ಯ ಮತ್ತು ಈ ಎಲ್ಲಾ ಕಾರಣಗಳು ನಷ್ಟದಲ್ಲಿ ನಡೆಯುವ ಒಂದು ಕೈಗಾರಿಕೆಗೆ ಮಾತ್ರ ಸೀಮಿತವಲ್ಲ. ನಷ್ಟದ ಕಾರಣಗಳು ಹೀಗಿವೆ.—

(೧) ರಾಜ್ಯ ಕೈಗಾರಿಕೆಗಳ ಉತ್ಪನ್ನಗಳಿಗೆ ಅನ್ವಯಿಸುವ ಆಮದು ನೀತಿ ಹಾಗೂ ದರ ನಿಗದಿ ಪಡಿಸುವಿಕೆ.

(೨) ವಿದ್ಯುಚ್ಛಕ್ತಿಯನ್ನು ಅಧಿಕವಾಗಿ ಮಿತಿಗೊಳಿಸುವಿಕೆ ಹಾಗೂ ಸರಬರಾಯಿ ಆಗುವ ವಿದ್ಯುಚ್ಛಕ್ತಿಗೆ ಹೆಚ್ಚಿನ ದರ ಕೊಡುವಿಕೆ, ಈ ಕಾರಣದಿಂದಾಗಿ ರಾಜ್ಯ ಉತ್ಪನ್ನಗಳ ಬೆಲೆ ಹೆಚ್ಚುವುದು ಹಾಗೂ ಉತ್ಪನ್ನಗಳು ಕಡಿಮೆಯಾವುದು.

(೩) ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಉತ್ಪನ್ನಗಳನ್ನು ತಯಾರಿಸಿ ಅವುಗಳನ್ನು ಮಾರಾಟ ಮಾಡಲು ಸೌಲಭ್ಯಗಳು ಇಲ್ಲದೆ ಇರುವ ಕಾರಣ ತುಲನಾತ್ಮಕ ಮಾರುಕಟ್ಟೆಯಲ್ಲಿ ರಾಜ್ಯ ಕೈಗಾರಿಕೆಗಳ ಸೋಲು.

(೪) ಉತ್ಪಾದನಾ ಶಕ್ತಿ ಇಲ್ಲದ ವಸ್ತುಗಳ ಮೇಲೆ ಅಧಿಕ ಬಂಡವಾಳ ಹೂಡುವಿಕೆ ಇರುವ ಶಕ್ತಿ ಸಾಮರ್ಥ್ಯವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳದೆ ಇರುವುದು.

(೫) ದುಡಿಯುವ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್) ಇಲ್ಲದೆ ಇರುವುದು ಹಾಗೂ ಸರಕಾಲದಲ್ಲಿ ಬಂಡವಾಳ ಇಲ್ಲದಿರುವಿಕೆ.

(೬) ಹಳೆಯದಾದ ಯಂತ್ರೋಪಕರಣಗಳ ಉಪಯೋಗಿಸುವಿಕೆಯಿಂದ ಅಧಿಕ ಬೆಲೆಯ ಕೆಳ ದರ್ಜೆಯ ವಸ್ತುಗಳ ತಯಾರಿಕೆ.

(೭) ಬೇಕಾಗಿರುವುದಕ್ಕಿಂತ ಹೆಚ್ಚಿನ ಉದ್ಯೋಗಿಗಳ ನೇಮಕಾತಿಯು ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸುವುದು ಈ ಕಾರಣದಿಂದ ಅವುಗಳ ಬೆಲೆ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಇಲ್ಲದಿರುವುದು.

(೮) ಸರ್ಕಾರದ ಘೋಷಿತ ನೀತಿಯಂತೆ ಸಾರ್ವಜನಿಕ ಸೇವೆಯ ಕೆಲವೊಂದು ಕ್ಷೇತ್ರಗಳಲ್ಲಿ ಲಾಭ ವಿಲ್ಲದೆ ನಡೆಸುವ ಕಾರ್ಯಾಚರಣೆ ಉದಾ.— ಕೆಲವೊಂದು ಭಾಗಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಲಾಭವಿಲ್ಲದ ಕಾರ್ಯಾಚರಣೆ ಮತ್ತು ಹಳ್ಳಿ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ವಿದ್ಯುತ್ ಮಂಡಲಿಯು ಕಡಿಮೆ ಬೆಲೆಯಲ್ಲಿ ವಿದ್ಯುಚ್ಛಕ್ತಿ ಪೂರೈಸುವುದು.

(೯) ಕಾರ್ಯಾಚರಣೆ ಮೇಚ್ಚ ನಿಗಧಿಪಡಿಸಿದ ಪ್ರಯಾಣದ ದರಕ್ಕಿಂತ ಅತಿ ಹೆಚ್ಚಾಗಿರುವುದು. (ಉದಾ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ)

(೧೦) ಸರ್ಕಾರದ ಘೋಷಿತ ನೀತಿಯಂತೆ ಸಾಮಾಜಿಕ ಹಾಗೂ ಆರ್ಥಿಕ ಉದ್ದೇಶಗಳಿಗೆ ಮಹತ್ವ ನೀಡುವ ಸಲುವಾಗಿ ಸ್ಥಾಪಿಸಿದ ಅಭಿವೃದ್ಧಿ ಉದ್ಯಮಗಳಿಂದ (ಡೆವೆಲಪ್‌ಮೆಂಟಲ್ ಎಂಟರ್‌ಪ್ರೈಸಸ್) ಹಳ್ಳಿಗಾಡಿನ ಯುವ ಜನರಿಗೆ ಉದ್ಯೋಗವನ್ನು ಒದಗಿಸಲು ಹಿಂದುಳಿದ ಜನಾಂಗದ ಉದ್ದಿಮೆದಾರರಿಗೆ ಸಹಾಯ ನೀಡುವಿಕೆ.

ಮೇಲ್ಕಂಡ ಕಾರಣಗಳನ್ನು ಗಮನಿಸಿದರೆ, ಉದ್ಯಮಗಳು ಲಾಭದಲ್ಲಿ ನಡೆಯಲು ಆದರ ಇಲಾಖಾ ಅಧಿಕಾರಿಗಳ ದಕ್ಷತೆ, ಕ್ರಿಯಾಶೀಲತೆಗಳೂ ಮುಖ್ಯವಾಗಿರುತ್ತವೆ. ಆದರಲ್ಲೂ ಪ್ರಧಾನಾಧಿಕಾರಿಗಳ ಪಾತ್ರ ಬಹು ಮುಖ್ಯವಾದುದಾಗಿರುತ್ತದೆ. ಅನೇಕ ಬಾರಿ ಉದ್ಯಮದ ಹತೋಟಿಯು ವ್ಯಾಪ್ತಿಯನ್ನೂ ಮೀರಿ ಸಂಬಂಧಿಸಿದ ಅಧಿಕಾರಿಗಳ ಕೈಮೀರಿದ ಹೊರಕಾರಣಗಳಿಂದಾಗಿಯೂ ನಷ್ಟ ಸಂಭವಿಸುತ್ತವೆ. ಸರ್ಕಾರವು ನಷ್ಟದಲ್ಲಿ ನಡೆಯುವ ಉದ್ಯಮಗಳ ಯಾವುದೇ ಅಧಿಕಾರಿಯನ್ನಾಗಲೀ ನಷ್ಟಕ್ಕೆ ಹೊಣೆಗಾರರನ್ನಾಗಿ ಮಾಡುವುದು ಉಚಿತ್ಯ ಹಾಗೂ ಅವಶ್ಯಕವೆಂದು ಸರ್ಕಾರವು ಭಾವಿಸಿರುವುದಿಲ್ಲ.

ಅನುಬಂಧ—೧

ಉದ್ದಿಮೆಗಳ ಹೆಸರು. —

೧. ಕರ್ನಾಟಕ ಕ್ಯಾಷ್ಯೂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೨. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೩. ಕರ್ನಾಟಕ ಫಿಲ್ಮ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೪. ಕರ್ನಾಟಕ ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೫. ಕರ್ನಾಟಕ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಲಿಮಿಟೆಡ್.
೬. ಕರ್ನಾಟಕ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್.
೭. ಕರ್ನಾಟಕ ಲೆದರ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೮. ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೯. ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೧೦. ಕರ್ನಾಟಕ ಸ್ಟೇಟ್ ಹ್ಯಾಂಡಿಕ್ರಾಫ್ಟ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೧೧. ಕರ್ನಾಟಕ ಸ್ಟೇಟ್ ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೧೨. ಕರ್ನಾಟಕ ಸ್ಟೇಟ್ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೧೩. ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್ ಲಿಮಿಟೆಡ್.
೧೪. ಕರ್ನಾಟಕ ಪೆಡ್ಡೊಲ್ಡ್ ಕ್ಯಾಸ್ಟ್ಸ್ ಅಂಡ್ ಪೆಡ್ಡೊಲ್ಡ್ ಟ್ರೈಬ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.

೧೫. ಕರ್ನಾಟಕ ಬ್ಯಾಕ್‌ವರ್ಡ್ ಕ್ಲಾಸಸ್ ಅಂಡ್ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೧೬. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್
೧೭. ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಲಿಮಿಟೆಡ್.
೧೮. ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಲಿಮಿಟೆಡ್.
೧೯. ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್.
೨೦. ಕರ್ನಾಟಕ ಸ್ಟೇಟ್ ಸೀಡ್ಸ್ ಕಾರ್ಪೊರೇಷನ್ ಲಿಮಿಟೆಡ್.
೨೧. ಶ್ರೀ ಕಂಠೀರವ ಸ್ಟುಡಿಯೋಸ್ ಲಿಮಿಟೆಡ್.
೨೨. ಕರ್ನಾಟಕ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್.
೨೩. ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನ್ ಲಿಮಿಟೆಡ್.
೨೪. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್.
೨೫. ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್.
೨೬. ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜನ್ಸೀಸ್ ಲಿಮಿಟೆಡ್.
೨೭. ಬೆಂಗಳೂರು ಅನಿಮಲ್ ಫುಡ್ ಕಾರ್ಪೊರೇಷನ್ ಲಿಮಿಟೆಡ್.
೨೮. ಚಾಮುಂಡಿ ಮೆಷೀನ್ ಟೂಲ್ಸ್ ಲಿಮಿಟೆಡ್.
೨೯. ಚಿತ್ರದುರ್ಗ ಕಾಪರ್ ಕಂಪೆನಿ ಲಿಮಿಟೆಡ್.
೩೦. ಕರ್ನಾಟಕ ಕಾಪರ್ ಕನ್ವೋರ್ಟಿಯಮರ್ ಲಿಮಿಟೆಡ್.
೩೧. ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮೆಷಿನರೀಸ್ ಕಂಪೆನಿ ಲಿಮಿಡೆಟ್.
೩೨. ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್.
೩೩. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ಸ್ ಲಿಮಿಟೆಡ್.
೩೪. ಕರ್ನಾಟಕ ವಿದ್ಯುತ್ ಕಾರ್ಖಾನೆ ಲಿಮಿಟೆಡ್.
೩೫. ಕರ್ನಾಟಕ ಸ್ಟೇಟ್ ಆಗ್ರೋ- ಕಾರ್ನ್ ಪ್ರಾಜಕ್ಟ್ಸ್ ಲಿಮಿಟೆಡ್.
೩೬. ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿ ಲಿಮಿಟೆಡ್.
೩೭. ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್,
೩೮. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್.
೩೯. ಮೈಸೂರು ಲಾಕ್ ಅಂಡ್ ಪೆಯಿಂಟ್ ವರ್ಕ್ಸ್ ಲಿಮಿಟೆಡ್.
೪೦. ಮೈಸೂರು ಮಿನರಲ್ಸ್ ಲಿಮಿಟೆಡ್.
೪೧. ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್.
೪೨. ಮೈಸೂರು ಷುಗರ್ ಕಂಪೆನಿ ಲಿಮಿಟೆಡ್.
೪೩. ಮೈಸೂರು ಟೊಬ್ಯಾಕೊ ಕಂಪನಿ ಲಿಮಿಟೆಡ್.
೪೪. ಎನ್. ಜಿ. ಇ. ಎಫ್. ಲಿಮಿಟೆಡ್.
೪೫. ದಿ ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್.
೪೬. ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಲಿಮಿಟೆಡ್.
೪೭. ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್.
೪೮. ಮೈಸೂರು ಮ್ಯಾಚ್ ಕಂಪೆನಿ ಲಿಮಿಟೆಡ್.
೪೯. ಕರ್ನಾಟಕ ಸ್ಟೇಟ್ ವೀನೀರ್ಸ್ ಲಿಮಿಟೆಡ್.
೫೦. ಕರ್ನಾಟಕ ಸ್ಟೇಟ್, ಫೈನಾನಷಿಯಲ್ ಕಾರ್ಪೊರೇಷನ್.
೫೧. ಕರ್ನಾಟಕ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್.
೫೨. ಕರ್ನಾಟಕ ಸ್ಟೇಟ್ ವೇರ್‌ಹೌಸಿಂಗ್ ಕಾರ್ಪೊರೇಷನ್.
೫೩. ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್.
೫೪. ಮೈಸೂರು ಆಸಿಟೇಟ್ ಅಂಡ್ ಕೆಮಿಕಲ್ಸ್ ಕಂಪೆನಿ ಲಿಮಿಟೆಡ್.
೫೫. ಕರ್ನಾಟಕ ಆಗ್ರೋ ಪ್ರೋಟೀನ್ಸ್ ಲಿಮಿಟೆಡ್.
೫೬. ಮೈಸೂರು ಲ್ಯಾಂಪ್ ವರ್ಕ್ಸ್.

ಅನುಬಂಧ—೨

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಉದ್ದಿಮೆಗಳ ಹೆಸರು	೧೯೮೧–೮೫		೧೯೮೨–೮೩		೧೯೮೩–೮೪	
		ನಷ್ಟ	ಕೂಡಿಬಂದ ನಷ್ಟ	ನಷ್ಟ	ಕೂಡಿಬಂದ ನಷ್ಟ	ನಷ್ಟ	ಕೂಡಿಬಂದ ನಷ್ಟ
೧	೨	೩	೪	೫	೬	೭	೮
೧	ಕರ್ನಾಟಕ ಕ್ಯಾಷ್ಯೂ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್	—೧೧.೩೪	೧೭.೭೨	ಅಲಭ್ಯ	ಅಲಭ್ಯ	ಅಲಭ್ಯ	ಅಲಭ್ಯ
೨	ಕರ್ನಾಟಕ ಕಾಂಪೋಸ್ಟ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್	—೬.೮೩	೨೫.೨೯	—೬.೭೦	೩೨.೧೫	—೧೦.೫೪	೪೨.೭೬
೩	ಕರ್ನಾಟಕ ಫಿಲ್ಮ್ ಇಂಡಸ್ಟ್ರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.	—೦.೭೨	೪೭.೨೯	—	—೬೦,೦೦	—	೬೦.೦೦
೪	ಕರ್ನಾಟಕ ಫಿಶರೀಸ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್	—೫.೮೩	೪೭.೧೯	—೧೩.೬೭	೫೧.೬೦	ಅಲಭ್ಯ	ಅಲಭ್ಯ
೫	ಕರ್ನಾಟಕ ಲೆದರ್ ಇಂಡಸ್ಟ್ರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್	—೩.೫೮	೧೦.೬೫	—೧೧.೨೧	೨೨.೮೬.	ಅಲಭ್ಯ	ಅಲಭ್ಯ
೬	ಕರ್ನಾಟಕ ಹ್ಯಾಂಡ್‌ಲೂಮ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.	—	—	—೧೫.೯೪	—	—	—
೭	ಕರ್ನಾಟಕ ಹ್ಯಾಂಡಿಕ್ರಾಫ್ಟ್ಸ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.	—೧೩.೮೨	೩೧.೫೯	—೧೪.೧೧	೪೬.೯೧	—೧೬.೮೨	೬೩.೭೩
೮	ಕರ್ನಾಟಕ ಟೂರಿಸಮ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್	—೫.೬೨	೪೫.೩೫	—೧೩.೮೬	೬೮.೪೧	—೨೬.೩೪	೪೪.೫೦
೯	ಜಂಗಲ್ ಲಾಡ್ಜಸ್ ಅಂಡ್ ರಿಸರ್ಟ್ಸ್ ಲಿ.	—೧.೯೦	೨.೨೨	ಅಲಭ್ಯ	ಅಲಭ್ಯ	ಅಲಭ್ಯ	ಅಲಭ್ಯ
೧೦	ಕರ್ನಾಟಕ ಎಸ್. ಸಿ. ಅಂಡ್ ಎಸ್. ಟಿ. ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿ.	—೫.೮೬	೩೨.೩೫	ಅಲಭ್ಯ	೩೫.೦೮	ಅಲಭ್ಯ	೭೭.೦೩
೧೧	ಕರ್ನಾಟಕ ಬಿ. ಸಿ. ಅಂಡ್ ಮೈನಾರಿಟೀಸ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಲಿ.	೧.೨೭	೭.೦೭	—೩.೨೫	೯.೯೫	—೫.೩೦	೧೫.೨೫

೧	೨	೩	೪	೫	೬	೭	೮
೧೨	ಕರ್ನಾಟಕ ಆಗ್ರೊ ಇಂಡಸ್ಟ್ರಿ ಕಾರ್ಪೊರೇಷನ್ ಲಿಮಿಟೆಡ್	—೮೨.೯೩	೭೮೬.೦೪	—೧೩೯.೩೮	೯೨೩.೫೮	—೧೧೨.೪೨	೫೦೩೬.೦೦
೧೩	ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಲಿಮಿಟೆಡ್	—೫,೩೮	—	—೨೪,೩೮	೧೮.೬೬	—೩೧.೫೨	೫೧.೧೭
೧೪	ಕರ್ನಾಟಕ ರಾಜ್ಯ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಲಿಮಿಟೆಡ್	—೧೩.೬೪	೧೯೧.೫೭	—೩೨.೯೮	೨೨೪.೦೩	—೧೫.೮೦	೨೬೯.೦೩
೧೫	ಕರ್ನಾಟಕ ಸ್ಟೇಟ್ ಫಾರೆಸ್ಟ್ರಿ ಇಂಡಸ್ಟ್ರಿ ಕಾರ್ಪೊರೇಷನ್ ಲಿಮಿಟೆಡ್	—೮೦,೧೭	೧೫೮೮.೩೩	—	೨೦೫.೯೨	—	೧೮೫೫.೭೮
೧೬	ಚಾಮುಂಡಿ ಮೆಷಿನ್ ಟೂಲ್ಸ್ ಲಿ.	—೯೮.೦೨	೫೭.೨೩	—೧೨.೪೯	೬೯.೭೨	—೧೦.೪೯	೮೦.೨೧
೧೭	ಚಿತ್ರದುರ್ಗ ಕಾಪರ್ ಕಂಪನಿ ಲಿಮಿಟೆಡ್	—೩೧.೩೫	೨೧೨.೩೬	—೨೬.೬೯	೨೩೯.೦೮	ಅಲಭ್ಯ	ಅಲಭ್ಯ
೧೮	ಕರ್ನಾಟಕ ಕಾಪರ್ ಕನ್ವರ್ಟಿಯಂಮೆಂಟ್ ಲಿಮಿಟೆಡ್.	—೧೬.೩೮	೧೬.೩೭	—೫೧.೦೯	೬೭.೪೭	ಅಲಭ್ಯ	ಅಲಭ್ಯ
೧೯	ಕರ್ನಾಟಕ ಇಂಪ್ಲಿಮೆಂಟ್ ಅಂಡ್ ಮೆಷಿನ್ ಕಂಪನಿ ಲಿಮಿಟೆಡ್.	—೮೭.೨೬	೩೫೭.೮೭	—೧೧೧.೨೬	೪೨೪.೬೭	—೧೬೯.೪೪	೫೨೧.೦೬
೨೦	ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜಂಟ್ಸ್ ಲಿಮಿಟೆಡ್.	೧೮೮.೨೬	೨೭೮.೪೫	—೧೯೧.೨೦	೪೮೮.೩೨	—೨೯೪.೦೦	೭೮೨.೩೨
೨೧	ಕರ್ನಾಟಕ ಅಗ್ರೊಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್.	೧೮.೮೮	೧೧೩.೮೬	—	೮೧.೦೬	—	೪೭.೭೨
೨೨	ಕರ್ನಾಟಕ ವಿದ್ಯುತ್ ಕಾರ್ಖಾನೆ ಲಿಮಿಟೆಡ್	—೪೦.೨೫	೧೭೧.೦೪	—೭೩.೩೭	೨೪೪.೪೧	—೬.೦೨	೨೫೦.೪೧
೨೩	ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್	—೩.೩೭	೨೩.೯೩	—೨೧.೨೪	೪೪.೯೧	—೧೯.೬೮	೬೪.೩೯
೨೪	ದಿ ಮೈಸೂರ್ ಲ್ಯಾಕ್ ಅಂಡ್ ಪೇಯಿಂಟ್ ವರ್ಕ್ಸ್ ಲಿಮಿಟೆಡ್	—೬.೪೭	—	—	—	—	—
೨೫	ಮೈಸೂರ್ ಟೊಬ್ಯಾಕೊ ಕಂಪನಿ ಲಿಮಿಟೆಡ್	—೨೨,೨೧	೧೯೪,೯೯	—೩೩.೦೨	೨೧೪.೦೮	—೫೫.೯೭	೨೯೭.೧೧
೨೬	ವಿಶ್ವೇಶ್ವರಾಯ ಐರನ್ ಅಂಡ್ ಸ್ಟೀಲ್ ಲಿಮಿಟೆಡ್	—೯೩.೭೪ —೯೩.೭೪	— —	—೨೨೫೫.೯೨ —೨೨೫೫.೯೨	೨೨೧೭.೫೯ ೨೨೫೫.೯೨	—೨೫೪೧.೪೬ —೨೫೪೧.೪೬	೪೭೫೯.೦೬ ೪೭೫೯.೦೬

೧	೨	೩	೪	೫	೬	೭	೮
೨೭	ಕರ್ನಾಟಕ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಲಿಮಿಟೆಡ್	—೧೦೩.೭	೪೭	೨೬೪೫.೪೮	—೧೪೫೨.೪೨	೪೬೪೪.೮೪	—೧೫೭೪.೪೨
೨೮	ದಿ ಮೈಸೂರ್ ಅಸಿಟೇಟ್ ಅಂಡ್ ಕೆಮಿಕಲ್ ಕಂಪನಿ ಲಿಮಿಟೆಡ್	೪೧.೮೦	೧೦೦೫.೯೩	—೪೦.೪೧	೧೦೪೬.೩೪	—೫೨.೯೧	೧೧೦೩.೦೨
೨೯	ಕರ್ನಾಟಕ ಆಗ್ರೊ ಪ್ರೊಟೀನ್ಸ್ ಲಿಮಿಟೆಡ್	—೧೮.೨೫	೫೫.೭೬	—೨೭.೮೩	೮೫.೦೫	ಅಲಭ್ಯ	ಅಲಭ್ಯ
೩೦	ಶ್ರೀಕಂಠೀರವ ಸ್ಟುಡಿಯೋಸ್ ಲಿಮಿಟೆಡ್	—	೧೪.೭೬	—	೧೪.೭೭	—	೧೪.೭೭
೩೧	ಮೈಸೂರ್ ಮ್ಯಾಟ್ ಕಂಪನಿ	—	—	—	೩.೧೪	ಅಲಭ್ಯ	ಅಲಭ್ಯ
೩೨	ಮೈಸೂರ್ ಶುಗರ್ ಕಂಪನಿ ಲಿಮಿಟೆಡ್	—	—	—೧.೯೨	—	—೧೮೨.೬೭	೧೧೩.೬೯
೩೩	ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್	—	—	—೧೭೫೫.೧೦	ಅಲಭ್ಯ	—೧೫೦೪.೦೦	ಅಲಭ್ಯ
	ಒಟ್ಟು	೬೫೫೨.೦೦		೧೧೦೦.೦೮		೧೫೪೯೩.೪೪	

ಶ್ರೀ ರಮೇಶ್‌ಕುಮಾರ್.—ಒಟ್ಟು ೫೬ ಸಾರ್ವಜನಿಕ ಉದ್ದಿಮೆಗಳು ಇದೆ. ಮೂವತ್ತಮೂರು ನಷ್ಟದಲ್ಲಿದೆ ಎಂದು ಹೇಳಿ ಹತ್ತು ಉದ್ದಿಮೆಗಳ ವಿವರಗಳನ್ನು ಕೊಟ್ಟಿಲ್ಲ. ಇಪ್ಪತ್ತಮೂರು ಉದ್ದಿಮೆಗಳಿಂದ ಒಟ್ಟು ೧೫,೪೯೩ ಲಕ್ಷ ರೂಪಾಯಿ ನಷ್ಟವಾಗಿವೆ ಎಂದು ಹೇಳಿದ್ದೀರಿ. ಇಪ್ಪತ್ತಮೂರು ಉದ್ದಿಮೆಗಳು ಏನು ಉಳಿಯುತ್ತವೆ ಅವುಗಳಲ್ಲಿಯಾದರೂ ನಷ್ಟ ಆಗದೇ ಇರುವಂತೆ ಮಾಡಲು ಮತ್ತು ಅವುಗಳಲ್ಲಿಯಾದರೂ ನೂರಕ್ಕೆ ನೂರರಷ್ಟು ಲಾಭ ಮಾಡುವುದಕ್ಕೆ ಏನು ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.—ಅವುಗಳನ್ನು ಪತ್ತೆ ಹಚ್ಚುವುದಕ್ಕೆ ಮಾನ್ಯ ಸದಸ್ಯರ ಸಲಹೆ ಪಡೆದು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ರಮೇಶ್‌ಕುಮಾರ್.—ಬಹಳ ಸಂತೋಷ. ನಷ್ಟವಾಗುವುದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ೩,೪,೫,೬ ಮತ್ತು ೭ ಇದರಲ್ಲಿ ಸ್ವಲ್ಪ ವ್ಯವಸ್ಥಿತವಾದ ಯೋಜನೆಯನ್ನು ಇಟ್ಟುಕೊಂಡು ಕೆಲಸ ಮಾಡಿದರೆ ನಷ್ಟವನ್ನು ಅವರು ನಿವಾರಿಸಿ ಕೊಳ್ಳಬಹುದಾಗಿತ್ತು. ಮತ್ತು ಹತ್ತನೆಯ ಹೇಳಿಕೆಯಲ್ಲಿ ಮೇಲ್ಕಂಡ ಕಾರಣಗಳನ್ನು ಗಮನಿಸಿದರೆ ಉದ್ಯಮಗಳು ಲಾಭದಲ್ಲಿ ನಡೆಯಲು ಅದರ ಇಲಾಖಾ ಅಧಿಕಾರಿಗಳ ದಕ್ಷತೆ, ಕ್ರಿಯಾಶೀಲತೆಗಳು ಪಾಲುಮುಖ್ಯವಾಗಿರುತ್ತದೆ ಅದರಲ್ಲಿ ಪ್ರಧಾನಾಧಿಕಾರಿಗಳ ಪಾತ್ರ ಬಹು ಮುಖ್ಯವಾದುದಾಗಿರುತ್ತದೆ. ಎಂದು ಹೇಳಿದ್ದಾರೆ. ಮತ್ತೆಕೆಳಗಡೆ ಹೇಳಿದ್ದಾರೆ. ಸರ್ಕಾರವು ನಷ್ಟದಲ್ಲಿ ನಡೆಯುವ ಉದ್ಯಮಗಳ ಯಾವುದೇ ಅಧಿಕಾರಿಯನ್ನಾಗಲೀ ನಷ್ಟಕ್ಕೆ ಹೊಣೆಗಾರರನ್ನಾಗಿ ಮಾಡುವುದು ಔಚಿತ್ಯ ಹಾಗೂ ಅವಶ್ಯಕವೆಂದು ಸರ್ಕಾರವು ಭಾವಿಸಿರುವುದಿಲ್ಲ ಎಂದು ಹೇಳಿದ್ದಾರೆ. ೩,೪,೫,೬ ಮತ್ತು ೭ ಇದರಲ್ಲಿ ಅಧಿಕಾರಿಗಳು ಸ್ವಲ್ಪ ಆಸಕ್ತಿ, ನಿಷ್ಠೆ, ಜವಾಬ್ದಾರಿಯಿಂದ ಕೆಲಸ ಮಾಡಿದ್ದರೆ ನಷ್ಟ ನಿವಾರಿಸಬಹುದಾಗಿತ್ತು. ಅವರ ಅಧಕ್ಷತೆಯಿಂದ ಈ ರೀತಿಯಾಗಿದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪುತ್ತೇನೆ. ಯಾವುದೇ ಅಧಿಕಾರಿ ಒಂದು ಸಾರ್ವಜನಿಕ ಕಾರ್ಖಾನೆಯಲ್ಲಿ ಅದರ ಶಕ್ತಿಯನ್ನಾಗಲೀ, ಗಳಿಕೆಯನ್ನಾಗಲೀ ದುರುಪಯೋಗ ಮಾಡುವುದಕ್ಕೆ ಹೋದರೆ ಅಂಥವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದೇ ಅಲ್ಲ, ಉಗ್ರ ಕ್ರಮವನ್ನು ಕೂಡ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಬಿ.ಎಸ್. ಯಡಿಯೂರಪ್ಪ, ಸದಸ್ಯರು ಹಾಜರಿಲ್ಲ ಶ್ರೀಮತಿ ಶಕುಂತಲ ಟಿ. ಚೌಗುಲೆಯವರು ತಮ್ಮ ಪ್ರಶ್ನೆಯನ್ನು ಕೇಳಿ.

ಚಿಕ್ಕೋಡಿ ಪಟ್ಟಣದಲ್ಲಿ ಕುಡಿಯುವ ನೀರಿನ ಪೂರೈಕೆ ಬಗ್ಗೆ

೯೬೧ ಶ್ರೀ ಶಕುಂತಲಾ ಟಿ. ಚೌಗುಲೆ (ಚಿಕ್ಕೋಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕೋಡಿ ಪಟ್ಟಣದಲ್ಲಿ ಕುಡಿಯುವ ನೀರಿನ ಕೊರತೆಯಿಂದಾಗಿ ಅಲ್ಲಿನ ನಾಗರೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ೧೯೮೦ ರಿಂದ ಚಿಕ್ಕೋಡಿ ಪಟ್ಟಣದಲ್ಲಿ ಕುಡಿಯುವ ನೀರನ್ನು ವಾಹನಗಳಿಂದ ಪೂರೈಸುವ ಕಾರಿತು ಕೊಳವೆ ಬಾವಿಗಳನ್ನು ತೋಡಿಸಲು ಅವುಗಳನ್ನು ದುರಸ್ತಿಗೊಳಿಸಲು ಮುಂತಾದ ತಾತ್ಪೂರ್ತಿಕ ಪರಿಹಾರ ಕಾರ್ಯಗಳಿಗೆ ಮೆಚ್ಚತಕ್ಕ ಹಣವೆಷ್ಟು ?

ಇ) ಸದರಿ ತಾತ್ಪೂರ್ತಿಕ ಪರಿಹಾರ ಕಾರ್ಯಗಳಿಗೆ ಮೆಚ್ಚತಕ್ಕ ಹಣವನ್ನು ಉಪಯೋಗಿಸಿ ಒಂದು ಶಾಶ್ವತ ರೂಪದ ಯೋಜನೆಯನ್ನು ಸರ್ಕಾರದವರು ಹಮ್ಮಿಕೊಳ್ಳಲು ಸಾಧ್ಯತೆಗಳಿದ್ದಿಲ್ಲವೇ ?